ಇಟ್ಟುಕೊಂಡಿದ್ದರು. ಸೊಸೆಗೂ ಮಗಳಿಗೂ ಅಷ್ಟಕ್ಕಷ್ಟೆ. ಹಾಗಾಗಿ ಸೊಸೆಗೆ ಗೊತ್ತಾಗದಂತೆ ಆ ಪಾತ್ರೆಗಳನ್ನು ಕಾಪಾಡಲು ಟ್ರಂಕ್‌ನಲ್ಲಿಟ್ಟು ಬೀಗ ಹಾಕಿದ್ದರು. ಸಂಸಾರದ ಸೂಕ್ಷ್ಮವಾದ ಗುಟ್ಟು ರಟ್ಟಾದುದು ಅಜ್ಜಿಗೆ ದೊಡ್ಡ ಪೆಟ್ಟೇ ಆಗಿತ್ತು. ಅಜ್ಜಿ ನೊಂದುಕೊಂಡರು. 'ಇನ್ನಿವತ್ತು ನಮ್ಮ ಮನೇಲಿ ರಂಪ ರಾಮಾಯಣ' ಎಂದು ಗೋಳಾಡಿದರು. ನಾನು ಅಜ್ಜಿಯ ಕ್ಷಮೆ ಕೇಳಿದೆ. ಅಜ್ಜಿಗೆ ಯಾವುದೇ ಕಾರಣಕ್ಕೂ ತೊಂದರೆ ಕೊಡಬೇಡಿ ಎಂದು ಮಗಸೊಸೆಗೆ ಎಚ್ಚರಿಕೆ ಕೊಟ್ಟು ಅಲ್ಲಿಂದ ಹೊರಟೆವು. ಅಜ್ಜಿಯ ಕಣ್ಣೀರು ಮಾತ್ರ ಇನ್ನೂ ನಿಂತಿರಲಿಲ್ಲ".

ಪೊಲೀಸ್ ಅಧಿಕಾರಿಯ ಈ ನಿವೇದನೆಯನ್ನು ಓದಿದಾಗ ನನಗೆ ನೆನಪಾದುದು ಅಮ್ಮನೇ. ಕಾಸಿನಸರದ ಗುಟ್ಟನ್ನು ಉಳಿಸಿಕೊಳ್ಳಲು ಅಮ್ಮನಿಗೆ ಸಾಧ್ಯವಾಯಿತು. ಆ ಅದೃಷ್ಟ ಅಜ್ಜಿಗಿರಲಿಲ್ಲ. ಟ್ರಂಕಿಗೂ ಗುಟ್ಟಿಗೂ ಎಷ್ಟೊಂದು ನಂಟಲ್ಲವೇ? ಕೆಲವು ಸಂದರ್ಭಗಳಲ್ಲಿ ಗುಟ್ಟನ್ನು ಕೆದಕದಿರುವುದೇ ಒಳ್ಳೆಯದು.

ಟ್ರಂಕನ್ನು ಬೆಂಚಿನ ರೂಪದಲ್ಲೂ ಬಳಸಬಹುದು. ಕೂರಲಿಕ್ಕೆ, ಮಕ್ಕಳ ಆಟಕ್ಕೆ ಇದು ಅಂಬಾರಿ. ಮೂರುನಾಲ್ಕು ದಶಕಗಳ ಹಿಂದೆ ಈಗಿನಂತೆ ಕುರ್ಚಿಗಳು, ಸೋಫಾಗಳು ಮನೆಗಳನ್ನು ಕಿಷ್ಕಿಂಧೆಗೊಳಿಸಿರಲಿಲ್ಲ. ಸೋಫಾ ಮೇಜುಗಳೇನಿದ್ದರೂ ಉಳ್ಳವರ ಮನೆಯ ಅಲಂಕಾರ ಸಾಮಗ್ರಿಗಳು. ಅಂಥ ಸಂದರ್ಭದಲ್ಲಿ ಟ್ರಂಕು ಕೂರಲಿಕ್ಕೆ ಸಹಜವಾಗಿಯೇ ಬಳಕೆಯಾಗುತ್ತಿತ್ತು. ಜನಸಾಮಾನ್ಯರ ಮಾತಿರಲಿ, ರಾಜ್ಯವೊಂದರ ಮುಖ್ಯಮಂತ್ರಿ ಕೂಡ ಟ್ರಂಕ್‌ನ ಮೇಲೆ ಕೂರುತ್ತಿದ್ದರೆಂದರೆ ನಂಬುವಿರಾ? ಆ ಮುಖ್ಯಮಂತ್ರಿ ನೃಪೇನ್ ಚಕ್ರವರ್ತಿ. ಹತ್ತು ವರ್ಷಗಳ ಕಾಲ (1978–1988) ತ್ರಿಪುರಾದ ಮುಖ್ಯಮಂತ್ರಿಯಾಗಿದ್ದ ಅವರು ಸರಳತೆಗೆ ಹೆಸರುವಾಸಿಯಾಗಿದ್ದವರು. ಮುಖ್ಯಮಂತ್ರಿಯಾಗಿದ್ದ ಸಮಯದಲ್ಲಿ ಅವರು ತಮ್ಮ ಕಚೇರಿಗೆ ಪ್ರತಿ ದಿನವೂ ಸಣ್ಣದೊಂದು ಟ್ರಂಕು ತರುತ್ತಿದ್ದರಂತೆ. ಮತ್ತೆ ಟ್ರಂಕಿನ ಜೊತೆಯೇ ಮನೆಗೆ ಹಿಂತಿರುಗುತ್ತಿದ್ದರಂತೆ. ಆ ಟ್ರಂಕ್‌ನಲ್ಲಿ ಅವರ ಪುಸ್ತಕಗಳು ಹಾಗೂ ಅಗತ್ಯ ಬಟ್ಟೆಗಳು ಇರುತ್ತಿದ್ದವಂತೆ. ನೃಪೇನ್‌ರ ಮನೆಯಲ್ಲಿ ಸೋಫಾ ಕೂಡ ಇರಲಿಲ್ಲವಂತೆ, ಕೂರಲಿಕ್ಕವರು ಟ್ರಂಕನ್ನೇ ಬಳಸುತ್ತಿದ್ದರಂತೆ. ನೃಪೇನ್‌ನಂಥವರಿಂದಲೇ ಟ್ರಂಕ್‌ನ ಘನತೆ ಈಗಲೂ ಉಳಿದಿರುವುದು.

ಕೆದಕಲಿಕ್ಕೆ, ನೇವರಿಸಲಿಕ್ಕೆ ಟ್ರಂಕಿನಲ್ಲಿ ಎಷ್ಟೊಂದು ವಸ್ತು–ಸಂಗತಿಗಳಿರುತ್ತವೆ. ಟ್ರಂಕ್ ತೆಗೆದ ತಕ್ಷಣ ವಾಸನೆಯೊಂದು ಮೂಗಿಗಡರುತ್ತದೆ. ಕಮಟಾಗಿದ್ದರೂ ಹಿತವೆನ್ನಿಸುವ ಆ ವಾಸನೆಗೆ ನಮ್ಮ ಬದುಕನ್ನೇ ರಿವೈಂಡ್ ಮಾಡಬಲ್ಲ ಶಕ್ತಿಯಿರುತ್ತದೆ. ಆ ವಾಸನೆಯನ್ನು ಸವಿಯುತ್ತಲೇ ಟ್ರಂಕ್‌ನೊಳಗಿನ ಬ್ರಹ್ಮಾಂಡವನ್ನು ನೇವರಿಸಬೇಕು. ಅಮ್ಮನ ಬೆಲೆ ಬಾಳುವ ಸೀರೆಗಳು, ಅಪ್ಪ ಮದುವೆಯಲ್ಲಿ ಧರಿಸಿದ ಕೋಟು ಟ್ರಂಕಿನ ತಳದಲ್ಲಿ ನುಸಿ ಉಂಡೆಗಳ ಸಖ್ಯದಲ್ಲಿ ಕಮ್ಮೆನ್ನುತ್ತ ಬೆಚ್ಚಗಿರುತ್ತಿದ್ದವು. ಅನುವು ಆಪತ್ತಿಗೊದಗಲಿ ಎಂದು ತವರಿನಿಂದ ಬಂದ ಕಾಸುಕವಡೆಯನ್ನು ಅಮ್ಮ ಜತನವಾಗಿ ಇರಿಸುತ್ತಿದ್ದುದು ಇದೇ ಟ್ರಂಕಿನೊಳಗೆ. ಸೀರೆಯ ಮಡಿಕೆಗಳಲ್ಲಿ ಅಲ್ಲೊಂದು ಇಲ್ಲೊಂದು ನೋಟು, ಉಭಯ ಕುಶಲೋಪರಿಯ ಪತ್ರಗಳು ತಲೆ ಮರೆಸಿಕೊಂಡಿರುತ್ತಿದ್ದವು. ಆಸ್ತಿಪಾಸ್ತಿಗೆ ಸಂಬಂಧಿಸಿದ ಪತ್ರಗಳಿಗೂ ಚಿನ್ನ–ಬೆಳ್ಳಿಗಳಿಗೂ ಟ್ರಂಕು ಆಸರೆ ನೀಡುತ್ತಿತ್ತು. ಹಾಗಾಗಿಯೇ ಈ ಟ್ರಂಕಿಗೆ ಸದಾಕಾಲ ಭದ್ರವಾದೊಂದು ಬೀಗ. ಯಾವುದಾದರೂ ಟ್ರಂಕಿಗೆ ಬೀಗದ ಮೂಗುದಾರವಿಲ್ಲವೆಂದರೆ, ಅದರೊಳಗೆ ಹಳೆಯ ಬಟ್ಟೆಗಳಷ್ಟೇ ಮುಲುಗುಟ್ಟುತ್ತಿವೆ ಎಂದರ್ಥ.